# ಒಂದೇ ಮನದಿ ಭಜಿಸು ವಾಗ್ದೇವಿಯ

1. **Ref.:** Shri Purandara Dasara Sahitya Part – 1, Pooja Tatva, edited by Shri Betageri Krishna Sharma and Shri Bengeri Huchha Rayaru, page no. 20.
2. **Ref.:** Purandara Sahitya Darshana, Samputa 2, Adhyatma Darshana edited by Prof. S.K. Ramachandra Rao, page no. 129.
3. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 04.
4. **Note:** The lyrics as per Ref. 3 are given in yellow highlights. The lyrics as per Ref. 2 are given without highlights. The wordings as per Ref. 1 are similar to Ref. 2 except few wordings which are marked in green highlights.
5. **Note:** Singer has followed lyrics as in Ref. 3.
6. **Note:** Ankita is same in Ref.1 & Ref. 2, but is different in Ref.3. We have considered Ref.3 as standard and taken that Ankita for listing.

| | |
|---|---|
| ರಾಗ: ತೋಡಿ ತಾಳ: ಅಟ | ರಾಗ: ಯದುಕುಲ ಕಾಂಬೋಧಿ ತಾಳ: ಝಂಪೆ |
| ಒಂದೇ ಮನದಲಿ ಭಜಿಸು ವಾಗ್ದೇವಿಯಾ ॥ ಪ ॥ | ಒಂದೇ ಮನದಿ ಭಜಿಸು ವಾಗ್ದೇವಿಯಾ |
| ಇಂದು ಮತಿ ಕೊಡುವಳು ಶ್ರೀ ಹರಿಯ ಧ್ಯಾನದೊಳು ॥ ಅಪ ॥ | ಇಂದು ಮತಿ ಕೊಡುವಳು ಹರಿಯ ಧ್ಯಾನದಲಿ |
| ಹಿಂದೆ ಪ್ರಹ್ಲಾದನು ಕಮಲಜನ ಸತಿಗೆರಗಿ | ಹಿಂದೆ ಪ್ರಹ್ಲಾದನು ಕಮಲಜನ ಸತಿಗೆರಗಿ |
| ಬಂದು ಆರಂಭಿಸಲು ಹರಿ ವಿಶ್ವಮಯನೆಂದು | ನಿಂದು ಆರಾಧಿಸಲು ಹರಿ ವಿಶ್ವನೆಂದು |
| ಬಂದ ವಿಘ್ನವ (ವಿಪ್ಲವ) ಕಳೆದು ಭಾವ ಶುದ್ಧಿಯನಿತ್ತು | ಬಂದ ವಿಘ್ನವ ಕಳೆದು ಭಾವ ಶುದ್ಧಿಯನಿತ್ತು |
| ಹೊಂದಿಸಿದಳಾ ಶ್ರೀ ಹರಿಯ ಚರಣವನು ॥ 1 ॥ | ಪೊಂದಿಸಿದಳಾಗ ಶ್ರೀ ಹರಿಯ ಚರಣದಲಿ |
| ಅಂದು ದಶಮುಖನನುಜನು ವಂದಿಸದೆ ವಾಣಿಯನು | ಅಂದು ದಶಮುಖನನುಜ ವಂದಿಸದೆ ವಾಣಿಯನು |
| ಬಂದು ತಪವನು ಗೈಯೆ ಬಹುಕಾಲಕೆ | ನಿಂದು ತಪವನು ಗೈಯೆ ಬಹುಕಾಲವು |
| ಅಂದದಿಂದಜ ಮೆಚ್ಚಿ ವರವಧಿಕ ಬೇಡೆನಲು | ಅಂದದಿಂದಜ ಮೆಚ್ಚಿ ವರವಧಿಕ ಬೇಡೆನಲು |
| ಬಂದು ಜಿಹ್ವೆಯಲಿ ನಿದ್ರೆಯನು ಬೇಡಿಸಿದಳು ॥ 2 ॥ | ನಿಂದು ಜಿಹ್ವೆಯಲಿ ನಿದ್ರೆಯ ಬೇಡಿಸಿದಳು |
| ಅರಿತು ಭಜಿಸಲು ಬಿಡದೆ ಅಜನರಸಿಯ ನಿತ್ಯ | ಅರಿತು ಭಜಿಸಲು ಬಿಡದೆ ಅಜನರಸಿಯ ನಿತ್ಯ |
| ಉರುತರವಾದ (ವಾಕ್ಶುದ್ಧಿಯನಿತ್ತು) (ವಾಕ್ ಶುದ್ಧಿಯನಿತ್ತು) | ಗುರುತರವಾದ ವಾಕ್ಶುದ್ಧಿಯನಿತ್ತು |
| ನಿರುತ ಶ್ರೀ ಪುರಂದರ ವಿಠ್ಠಲನ ಸೇವೆಯೊಳು | ತ್ವರಿತದಿ ಪುರಂದರ ವಿಠ್ಠಲನ ಸೇವೆಯೊಳಿರಿಸಿ |
| ಪರತತ್ವದ ಕಥಾಮೃತವನುಣಿಸುವವಳು ॥ 3 ॥ | ಪರತತ್ವವಾದ ಕಥಾಮೃತ ನುಡಿಸುವವಳು |

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

ಇದರಲ್ಲಿ ವಾಗ್ದೇವಿಯ (ಸರಸ್ವತಿಯ) ಭಜನೆಯ ಫಲವನ್ನು ಹೇಳಲಾಗಿದೆ. ಈ ದೇವಿ ಉತ್ತಮವಾದ ವಾಕ್ ಶುದ್ಧಿಯನ್ನು ಕೊಟ್ಟು, ಯಾವಾಗಲೂ ಶ್ರೀ ಹರಿಯ ಸೇವೆಯಲ್ಲಿಟ್ಟು (ಪರತತ್ವದ ಕಥಾಮೃತವನ್ನು) ಪರಮಾತ್ಮನ ವಿಷಯಕವಾದ ಜ್ಞಾನವನ್ನು ದಯೆಪಾಲಿಸುವಳು.

**ವಾಗ್ದೇವಿ** – ಪರಾ, ಪಶ್ಯಂತೀ, ಮಧ್ಯಮಾ, ವೈಖರೀ ಎಂಬ ನಾಲ್ಕು ಬಗೆಯ ವಾಕ್ಕುಗಳಿಗೂ ಅಭಿಮಾನಿ ದೇವತೆ, ಸರಸ್ವತಿ

**ಇಂದು** – ಈ ಹೊತ್ತು; ಸದ್ಯಃಫಲಪ್ರದಳಾದವಳು.

**ಮತಿ** – ಬುದ್ಧಿಯನ್ನು; ಪ್ರೇರಣೆಯನ್ನು

**ಕಮಲಜ** = ಬ್ರಹ್ಮ

**ಹಿಂದೆ ಪ್ರಹ್ಲಾದನು** – ಭಾಗವತದಲ್ಲಿ ಬರುವ ಕತೆ. ಹಿರಣ್ಯಕಶಿಪುವಿನ ಮಗನಾದ ಪ್ರಹ್ಲಾದನು ದೈತ್ಯನಾದರೂ ಸರಸ್ವತಿಯನ್ನು ಆರಾಧಿಸಿದುದರಿಂದ ಅವನಲ್ಲಿ ಹರಿಭಕ್ತಿ ನೆಲೆಸಿತು.

**ವಿಪ್ಲವ** = ಸಂಕಟ, ಗಂಡಾಂತರ

**ಅಂದು ದಶಮುಖನನುಜ** – ರಾಮಾಯಣದ ಉತ್ತರಕಾಂಡದಲ್ಲಿ ಬರುವ ಕತೆ. ಬ್ರಹ್ಮನನ್ನು (ಅಜ) ಕುರಿತು ಕುಂಭಕರ್ಣನು (ದಶಮುಖನ, ರಾವಣನ; ಅನುಜ, ತಮ್ಮ) ತಪಸ್ಸು ಮಾಡಿದ ಸಂದರ್ಭದಲ್ಲಿ, ಬ್ರಹ್ಮನು ವರವನ್ನು ಕೇಳೆಂದಾಗ ಸರಸ್ವತಿಯು ಅವನ ನಾಲಗೆಯಲ್ಲಿ ನಿಂತು ನಿದ್ರೆಯನ್ನು ಬೇಡುವಂತೆ ಮಾಡಿದಳು.

**ಅರಿತು ಭಜಿಸಲು** – ಹರಿಯು ಮುಖ್ಯಾಭಿಮಾನಿಯೆಂಬುದನ್ನು ಅರಿತುಕೊಂಡು.

**ಅಜನರಸಿಯ** – ಬ್ರಹ್ಮ (ಅಜ)ನ ಅರಸಿಯನ್ನು, ಸರಸ್ವತಿಯನ್ನು

**ಉರುತರವಾದ** – ಶ್ರೇಷ್ಠವಾದ; ಮುಕ್ತಿಗೆ ನೆರವಾಗುವ.

**ಪರತತ್ತ್ವದ ಕಥಾಮೃತವನು** – ಸರ್ವೋತ್ತಮನಾದ ಹರಿಯ ಹಿರಿಮೆಯನ್ನು ಹೇಳುವ ಕತೆಗಳನ್ನು.

**Classification:** Keerthane
**Ankita:** purandara vittala
**Location:** NA
**Category:** Saraswati Stuti, Pooja Tatva
**Sub-Category:** saraswati, krishna, dhyana, prahallada, brahma, loka, bhava, ravana, kumbhakarna, nalige, bhajane, amruta, tapa, nidde,
**Pravachana:** NA
**Explanation:** NA